ಇವೆಲ್ಲವೂ ಸಿನಿಮಾಗಳಲ್ಲೂ ಬಿಂಬಿತವಾಗುತ್ತಿವೆ'' ಎನ್ನುವ ಅಭಿಪ್ರಾಯ ಅವರದು. ಈಚೆಗೆ ಬಿಡುಗಡೆಯಾದ ತಮ್ಮ ಅಭಿನಯದ 'ಹೊಂದಿಸಿ ಬರೆಯಿರಿ' ಸಿನಿಮಾ ಉದಾಹರಿಸಿದ ಅವರು, ''ಈ ಸಿನಿಮಾದಲ್ಲಿ ಆರು ನಟಿಯರಿದ್ದಾರೆ. ಎಲ್ಲ ಪಾತ್ರಗಳಿಗೂ ಪ್ರಾಮುಖ್ಯವಿದೆ. ಇದು ಒಂದು ಉದಾಹರಣೆಯಷ್ಟೆ. ನನಗೆ ಬರುತ್ತಿರುವ ಸ್ಕ್ರಿಪ್ಟ್ ಆಗಲಿ, ನಾನು ಕೇಳುತ್ತಿರುವ ಕಥೆಗಳಾಗಲಿ, ಮಹಿಳೆಯರು ಎದ್ದುಕಾಣುವಂಥದ್ದಾಗಿವೆ. ಮಹಿಳೆಯರನ್ನು ಬೋಲ್ಡ್ ಆಗಿ, ಸೂಕ್ಷ್ಮವಾಗಿ ಚಿತ್ರಿಸುವಂಥ ಪ್ರಯತ್ನಗಳವು'' ಎನ್ನುತ್ತಾರೆ.

ಕಳೆದ ಎರಡು ವರ್ಷಗಳಿಂದ, ಸಿನಿಮಾದಲ್ಲಿ ನಟಿಯರ ಪಾತ್ರಕ್ಕೆ ಪ್ರಾಧಾನ್ಯ ನೀಡುತ್ತಿರುವ ಬದಲಾವಣೆಯೂ ಕಾಣುತ್ತಿದೆ ಎಂದು ಹೇಳುವ ಅವರು, ''ಹೀರೋಯಿನ್‌ಗಳಿಗೆ ಈಗ ಶೆಲ್ಫ್ ಲೈಫ್ ಇಲ್ಲ. ನಟಿಯರು ಮದುವೆಯಾದ ಮೇಲೂ ನಟನೆ ಮಾಡುತ್ತಿದ್ದಾರೆ. ಇಡೀ ಸಿನಿಮಾವನ್ನು ಅವರೇ ಕೊಂಡೊಯ್ಯಬಲ್ಲರು. ಆಗ ಸೂಪರ್ ಸ್ಟಾರ್ ಇದ್ದರೆ ದೊಡ್ಡ ಸಿನಿಮಾಗಳು ಸಿಗುತ್ತಿದ್ದವು. ಈಗ ಕಥೆಗಳೇ ಹೀರೊ. ಮಹಿಳೆಯರಿಗಾಗಿಯೇ ಕಥೆಗಳು ರೂಪುಗೊಳ್ಳುತ್ತಿರುವ ಕಾಲವಿದು'' ಎನ್ನುತ್ತಾರೆ.

ಒಟಿಟಿ ಎಂಬ ಹೊಸ ಮಾಧ್ಯಮದೆಡೆಗೆ ಮಾತು ಹೊರಳಿಸಿದ ಅವರು, 'ಒಟಿಟಿ ಹಳೆಯ ಸಿನಿಮಾ ಸೂತ್ರವನ್ನು ಹರಿದಂತೆ ಕಾಣುತ್ತಿದೆ. ಸ್ಕ್ರಿಪ್ಟ್ ಚೆನ್ನಾಗಿದ್ದರೆ ಆ ಸಿನಿಮಾ ಮುಂದೆ ಬಂದೇ ಬರುತ್ತದೆ. ನಟಿಯರ ಪಾತ್ರ ಚಿಕ್ಕದಿದ್ದರೂ ವಿಷಯ–ಪಾತ್ರ ತೂಕದ್ದಾಗಿದ್ದರೆ ಅದನ್ನು ಒಪ್ಪಬಹುದು. ಆದರೆ ಈಗ ಎಲ್ಲಕ್ಕಿಂತ ಹೆಚ್ಚಾಗಿ, ಜನರನ್ನು ಥಿಯೇಟರಿಗೆ ಕರೆಸುವುದೇ ಕಷ್ಟವಾಗಿದೆ. ಟಿಕೆಟ್ ಬೆಲೆ, ಜಿಎಸ್‌ಟಿ ಇವನ್ನೆಲ್ಲಾ ನೋಡಿ ಜನರು ಥಿಯೇಟರಿಗೆ ಬರುವುದೇ ಕಡಿಮೆಯಾಗಿದೆ. ಇಂಥ ಸ್ಥಿತಿಯಲ್ಲಿ ದೊಡ್ಡ ಸ್ಟಾರ್ ಸಿನಿಮಾಗಳು ಕೂಡ ವರ್ಕ್ ಔಟ್ ಆಗುವುದು ಕಷ್ಟವಾಗಿದೆ. ಸೂಪರ್ ಸ್ಟಾರ್ ಆದರೂ ಸಿನಿಮಾ ವರ್ಕ್ ಔಟ್ ಆಗುತ್ತದೋ ಇಲ್ಲವಾ ಎಂಬ ಪ್ರಶ್ನೆ ನಿರ್ಮಾಪಕರಿಗೇ ಕಾಡುತ್ತಿದೆ'' ಎನ್ನುತ್ತಾರೆ ಸಂಯುಕ್ತಾ,

ಹಾಗಿದ್ದರೆ ವರ್ಕ್ ಔಟ್ ಆಗದಿರುವ ದೊಡ್ಡ ಸ್ಟಾರ್‌ಗಳ ಸಿನಿಮಾಗಳ ಸಂಖ್ಯೆಯೇನು ಕಡಿಮೆಯಿದೆಯೇ? ಇದು ಹೀರೋಯಿನ್ ವಿಚಾರಗಳಲ್ಲಿ ಆಗುವುದಿಲ್ಲವೇಕೆ? ಹೀರೋಯಿನ್‌ಗಳಿಗೂ ಫ್ಯಾನ್ ಫಾಲೋವರ್ಸ್ ಸಾಕಷ್ಟು ಜನ ಇರುವಾಗ ಹೀರೋ ವಿಷಯದಲ್ಲಾಗುವ ಪ್ರಯತ್ನಗಳು, ನಟಿ ವಿಚಾರದಲ್ಲಿ ಅನ್ವಯವಾಗುವುದಿಲ್ಲವೇ? ಈ ಪ್ರಶ್ನೆಗಳಿಗೆ ನೇರವಾದ ಉತ್ತರಗಳು ದೊರೆಯುವುದಿಲ್ಲ. ''ಹೀಗೆ ನಟಿಯರನ್ನು ಕಡೆಗಣಿಸಿ ಮಾಡಿದ ಸಿನಿಮಾಗಳು ಯಶಸ್ವಿಯಾಗುತ್ತಿಲ್ಲ. ವೀಕ್ಷಕರು ಬಯಸುತ್ತಿರುವುದು ಒಳ್ಳೆ ಕಥೆಯಷ್ಟೆ'' ಎಂದು ಸಂಯುಕ್ತಾ ಹೇಳುತ್ತಾರೆ.

''ಕೊರೊನಾ ನಂತರ ಥಿಯೇಟರಿಗೆ ಹೋಗುವ ರೂಢಿ ಜನರಲ್ಲಿ ಕಡಿಮೆಯಾಯಿತು. ಎರಡು ಎರಡೂವರೆ ವರ್ಷ ಕೊರೊನಾ ಕಾರಣವಾಗಿ ಮಾಸ್ ಸಿನಿಮಾಗಳಿಗೆ ಪೆಟ್ಟು ಬಿತ್ತು. ಥಿಯೇಟರಿಗೆ ಜನ ಕರೆಸಬೇಕೆಂದು ಮಾಡಿದ ಮಾಸ್ ಸಿನಿಮಾಗಳೂ ಸೋತವು. ಕೊರೊನಾ ಸಮಯದಲ್ಲಿ ಬಂದ ಒಟಿಟಿಯಿಂದ ಮನೆಯಲ್ಲಿಯೇ, ಫೋನಲ್ಲಿಯೇ ಎಲ್ಲಾ ರೀತಿ ಕಂಟೆಂಟ್ ಸಿಗುವ ಹಾಗೆ ಆಯಿತು. ಒಟಿಟಿಯಲ್ಲಿ ಮಹಿಳಾ ಪ್ರಧಾನ ವಿಷಯವನ್ನಿಟ್ಟುಕೊಂಡೇ ಹಲವು ಸಿನಿಮಾಗಳನ್ನು ನೋಡಿದೆ. ಸದ್ಯ ಕನ್ನಡದಲ್ಲಿಯೂ ಅಂಥ ಪ್ರಯತ್ನಗಳು ಸಾಗುತ್ತಿವೆ'' ಎನ್ನುತ್ತಾರೆ.



ಸಂಯಮ ಮತ್ತು ವಿರಹದ ರೂಪಕಗಳ ಜುಗಲಬಂದಿಯ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದಲ್ಲಿ ಆರತಿ, ಜಯಂತಿ

## ಸಿದ್ಧ ಸಿನಿಮಾ ವ್ಯಾಕರಣ

ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರ ಪರಂಪರೆಯ ಕೊಂಡಿ ಪಿ.ಎಚ್. ವಿಶ್ವನಾಥ್ ಅವರು ಮಹಿಳಾ ಪ್ರಧಾನ ಚಿತ್ರಗಳ ಸಂಬಂಧ ತಮ್ಮ ನೆನಪುಗಳನ್ನು ಮೆಲುಕು ಹಾಕಿದ್ದು ಹೀಗೆ:

''ಮಹಿಳಾ ಪ್ರಧಾನ ಸಿನಿಮಾಗಳೆಂದರೆ ಪುಟ್ಟಣ್ಣ ಕಣಗಾಲ್ ಅವರೇ ನೆನಪಾಗುವುದು. ಅವರು ಮಾಡಿದ ಸಿನಿಮಾಗಳು ಅಂಥವು. ಅದಾದ ನಂತರ ತರಾಸು ಕಾದಂಬರಿಗಳನ್ನು ದೊರೈ–ಭಗವಾನ್ ಅವರು ಮಾಡಿದ ಸಿನಿಮಾಗಳು ಮಹಿಳಾ ಪ್ರಧಾನ ಇದ್ದವು. ಆಗ ಕಾದಂಬರಿ ಆಧಾರಿತ ಚಿತ್ರಗಳು ಮಹಿಳೆಯರನ್ನೇ ಕೇಂದ್ರವಾಗಿಟ್ಟುಕೊಂಡಿದ್ದವು. ಕಾದಂಬರಿ ಓದುತ್ತಿದ್ದದ್ದೇ ಮಧ್ಯಮ ವರ್ಗದ ಹೆಣ್ಣುಮಕ್ಕಳು. ತ್ರಿವೇಣಿ, ಇಂದಿರಾ ಅವರಂಥ ಲೇಖಕಿಯರು ಹೆಣ್ಣುಮಕ್ಕಳ ಬಗ್ಗೆಯೇ ಕಥೆಗಳನ್ನು ಬರೆಯುತ್ತಿದ್ದರು. ಆ ಕಥೆಗಳಿಗೆ ಜೀವ ತುಂಬುವಂಥ ನಟಿಯರೂ ಇದ್ದರು':.

''ಸಿನಿಮಾರಂಗದ ಒಂದು ಕಾಲಘಟ್ಟದಲ್ಲಿ ಕಾದಂಬರಿ–ಸಿನಿಮಾ ಒಂದಕ್ಕೊಂದು ಬೆಸೆದುಕೊಂಡಿದ್ದವು. ಆಗ ಓದುವುದಕ್ಕೆ ಜನರಿಗೆ ಸಮಯ ಇತ್ತು. ಸಿನಿಮಾ ಹಾಗೂ ನಾಟಕ ಬಿಟ್ಟರೆ ಬೇರೆ ಮನರಂಜನೆಯೂ ಇರಲಿಲ್ಲ. ಕಾದಂಬರಿ ಆಧರಿತ ಸಿನಿಮಾಗಳನ್ನು ಮಾಡುತ್ತಿದ್ದರಿಂದ ಒಂದು 'ರೆಡಿಮೇಡ್ ಆಡಿಯನ್ಸ್' ಇರುತ್ತಿದ್ದರು. ಕಾದಂಬರಿ ಓದಿದವರಿಗೆ, ಸಿನಿಮಾದಲ್ಲಿ ಹೇಗೆ ಕಥೆ ಬಂದಿದೆ ನೋಡೋಣ ಎಂಬ ಕುತೂಹಲ. ಹುಡುಕಿಕೊಂಡು ಹೋಗಾದರೂ ಸಿನಿಮಾ ನೋಡುತ್ತಿದ್ದರು'' ಎಂದು ಕಾದಂಬರಿ ಮತ್ತು ಸಿನಿಮಾ ನಡುವಿನ ಗಟ್ಟಿ ಸಂಬಂಧವನ್ನು ತೆರೆದಿಡುತ್ತಾರೆ ವಿಶ್ವನಾಥ್.

''ಕಾದಂಬರಿಗಳನ್ನು ಸಿನಿಮಾ ಮಾಡುತ್ತಿದ್ದುದರ ಹಿಂದೆ, ಒಂದು ಕಥಾವಸ್ತು ಸಿಗುತ್ತದೆ ಎನ್ನುವುದು ಒಂದು ಉದ್ದೇಶವಾದರೆ, ಮಿನಿಮಮ್ ಆಡಿಯನ್ಸ್ ಇರುತ್ತಿದ್ದರು ಎಂಬುದು ಮತ್ತೊಂದು. ಕಾದಂಬರಿ ಹೊರತಾಗಿಯೂ ಮಹಿಳಾ ಪ್ರಧಾನ ಸಿನಿಮಾಗಳು ಬಂದವು. 'ಪಂಚಮವೇದ', 'ಶ್ರೀಗಂಧ', 'ಅರಗಿಣಿ', 'ಅರುಣೋದಯ' – ಇಂಥ ಮಹಿಳಾ ಪ್ರಧಾನ ಸಿನಿಮಾಗಳನ್ನು ನಾನೇ ಮಾಡಿರುವೆ. ಎಲ್ಲವೂ ಸಿನಿಮಾಗಾಗಿಯೇ ಕಥೆ ಮಾಡಿಕೊಂಡಿದ್ದು. ಆದರೆ ಅವು ಮಹಿಳಾ ಪ್ರಧಾನವಾಗಿದ್ದವು. ಸಾಕಷ್ಟು ದಿನಗಳ ಕಾಲ ಓಡಿದವು ಕೂಡ'' ಎಂದು ನೆನಪುಗಳನ್ನು ನೇವರಿಸಿದ ಅವರು, ಆ ಕಾಲಘಟ್ಟದ ನಂತರ ಕೂಡ ನಟಿಯರು ತೆರೆ ಮೇಲೆ ಮಿಂಚಿದರು ಎನ್ನುತ್ತಲೇ, ಮಾಸ್ ಹೀರೋಯಿನ್ ಆಗಿ ಮಾಲಾಶ್ರೀ ಮಿಂಚಿದ್ದ ಉದಾಹರಣೆ ಕೊಡುತ್ತಾರೆ. ''ಮಾಲಾಶ್ರೀ ಅವರ ಕೆಲವು ಸಿನಿಮಾಗಳಲ್ಲಿ ಅವರ ಪಕ್ಕ ಇದ್ದ ಹೀರೋಗಳೇ ಬಂದುಹೋಗುವ